☎ 0836 - 2224098, 2224195
2224301, 2222616
2224274, 2222505

# ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ – 580 025

ಕ್ರ.ಸಂ.: ಹು.ಧಾ.ನ.ಪ್ರಾ : ಅ.ವಿ/ಗಬ್ಬೂರ/ಖಾ.ವಿ/2023-24 | 2029 ದಿನಾಂಕ : 28-08-2023

**ವಿಷಯ :** ಹುಬ್ಬಳ್ಳಿ ತಾ॥ ಗಬ್ಬೂರ ಗ್ರಾಮದ ರಿ.ಸ.ನಂ 67/6 ಕ್ಷೇತ್ರ 04ಎ-38ಗು, ರಿ.ಸ.ನಂ 68/1 ಕ್ಷೇತ್ರ 03ಎ-39ಗು ಹಾಗೂ ರಿ.ಸ.ನಂ 68/2+4 ನೇದ್ದರ ಪೈಕಿ ಕ್ಷೇತ್ರ 15ಗು ಒಟ್ಟು ಕ್ಷೇತ್ರ 09ಎ-12ಗು ಪ್ರದೇಶದ ವಸತಿ ಉದ್ದೇಶದ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರ ನೀಡುವ ಕುರಿತು.

**ಉಲ್ಲೇಖ :** ಈ ಕಚೇರಿ ಪತ್ರ ಸಂಖ್ಯೆ: ಹು.ಧಾ.ನ.ಪ್ರಾ/ಅ.ವಿ/ಗಬ್ಬೂರ/2021-22/3853
ದಿನಾಂಕ : 06-01-2022

**ಪೀಠಿಕೆ :**

: ಹುಬ್ಬಳ್ಳಿ ತಾ॥ ಗಬ್ಬೂರ ಗ್ರಾಮದ ರಿ.ಸ.ನಂ 67/6 ಕ್ಷೇತ್ರ 04ಎ-38ಗು, ರಿ.ಸ.ನಂ 68/1 ಕ್ಷೇತ್ರ 03ಎ-39ಗು ಹಾಗೂ ರಿ.ಸ.ನಂ 68/2+4 ನೇದ್ದರ ಪೈಕಿ ಕ್ಷೇತ್ರ 15ಗು ಒಟ್ಟು ಕ್ಷೇತ್ರ 09ಎ-12ಗು ಪ್ರದೇಶದ ವಸತಿ ಉದ್ದೇಶದ ವಿನ್ಯಾಸವನ್ನು ಪ್ರಾಧಿಕಾರದಿಂದ ಅನುಮೊದಿಸಿಕೊಂಡು ಶ್ರೀಮತಿ ತಸ್ನಿಮ ಸಮ್ಸಿ ಕೋಂ ಮಹಮ್ಮದ ಇಸ್ಮಾಯಿಲ್ ಸಮ್ಸಿ ಹಾಗೂ ಇತರರು, 1 ನೇ ಮಹಡಿ, ರಿಲಾಯನ್ಸ್ ಡಿಜಿಟಲ್ ಮೇಲುಗಡೆ, ವಿದ್ಯಾನಗರ, ಹುಬ್ಬಳ್ಳಿ ಇವರು ಪ್ರಾಧಿಕಾರದಿಂದ ತಿಳಿಸಲಾದ ಮೇಲ್ವಿಚಾರಣಾ ಶುಲ್ಕ ಸಂದಾಯ ಮಾಡಿ ಪರವಾನಿಗೆ ಪಡೆದುಕೊಂಡು ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ರಸ್ತೆ ನಿರ್ಮಾಣ, ಡಾಂಬರೀಕರಣ, ಅಡ್ಡಗಾಲುವೆಗಳು, ಗಟಾರ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಿರುವರು. ವಿದ್ಯುತ್ ಕಾಮಗಾರಿಗಳನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ಇವರ ಮೇಲ್ವಿಚಾರಣೆಯಲ್ಲಿ ಕೈಗೊಂಡಿರುವರು. ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ದಿನಾಂಕ : 11-08-2023 ರಂದು ಪ್ರಾಧಿಕಾರದ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಇತರೇ ತಾಂತ್ರಿಕ ವರ್ಗದವರು ವಸತಿ ವಿನ್ಯಾಸದಲ್ಲಿಯ ಅಭಿವೃದ್ಧಿ ಕಾಮಗಾರಿಗಳನ್ನು ಪರಿವೀಕ್ಷಿಸಿ, ವಸತಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಮಾಡಿರುವುದಾಗಿ ವರದಿ ಸಲ್ಲಿಸಿರುವರು.

## ಪ್ರಾಧಿಕಾರದ ಆದೇಶ

ಹುಬ್ಬಳ್ಳಿ ತಾ॥ ಗಬ್ಬೂರ ಗ್ರಾಮದ ರಿ.ಸ.ನಂ 67/6 ಕ್ಷೇತ್ರ 04ಎ-38ಗು, ರಿ.ಸ.ನಂ 68/1 ಕ್ಷೇತ್ರ 03ಎ-39ಗು ಹಾಗೂ ರಿ.ಸ.ನಂ 68/2+4 ನೇದ್ದರ ಪೈಕಿ ಕ್ಷೇತ್ರ 15ಗು ಒಟ್ಟು ಕ್ಷೇತ್ರ 09ಎ-12ಗು ಪ್ರದೇಶದ ವಸತಿ ಉದ್ದೇಶದ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಈ ಕೆಳಗೆ ತಿಳಿಸಿದ ಕರಾರುಗಳಿಗೆ ಒಳಪಟ್ಟು ಮುಕ್ತಾಯ ಪ್ರಮಾಣ ಪತ್ರ ನೀಡಲಾಗಿದೆ.

1. ಮಹಾನಗರ ಪಾಲಿಕೆಗೆ ವಸತಿ ಉದ್ದೇಶದ ವಿನ್ಯಾಸವನ್ನು ಹಸ್ತಾಂತರ ಆಗುವವರೆಗೆ ನಿವೇಶನದಾರರಿಗೆ ನೀರು ಸರಬರಾಜು ಮಾಡಲು ಕ್ರಮ ಕೈಕೊಳ್ಳಬೇಕು.
2. ಮಹಾನಗರ ಪಾಲಿಕೆಯ ನಿರ್ದೇಶನದಂತೆ ವಿದ್ಯುತ್ ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸುವುದು.
3. ಕಸದ ತೊಟ್ಟಿ ಅಳವಡಿಸುವ ಕುರಿತಾಗಿ ಮಹಾನಗರ ಪಾಲಿಕೆ ಸೂಚಿಸಿದಂತೆ ಕ್ರಮ ಕೈಕೊಳ್ಳುವುದು.
4. ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿ ಕುರಿತು ಮುಖ್ಯ ಕೊಳವೆ ಲಭ್ಯವಾದಾಗ ಜೋಡಣೆ ಮಾಡಲು ಪಾಲಿಕೆಯ ಪರವಾನಿಗೆ ಪಡೆದು ವಿನ್ಯಾಸದಾರರು ತಮ್ಮ ಸ್ವಂತ ಖರ್ಚಿನಲ್ಲಿ ಜೋಡಣೆ ಮಾಡಿಕೊಡುವುದು.
5. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ಸೂಚಿಸುವ ಯಾವುದೇ ಕಾಮಗಾರಿಗಳಲ್ಲಿಯ ದೋಷಗಳನ್ನು ವಿನ್ಯಾಸದಾರರು ತಮ್ಮ ಸ್ವಂತ ಖರ್ಚಿನಿಂದ ಮಾಡಿಸುವುದು.

6. ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿಗಳಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ನಿರ್ಧರಿಸುವ ಪ್ರೋರೇಟಾ ಮೊತ್ತವನ್ನು ವಿನ್ಯಾಸದಾರರು ತುಂಬುವುದು.

7. ಮಹಾನಗರ ಪಾಲಿಕೆಯವರು ಸೂಚಿಸುವ ಇನ್ನಿತರ ಕಾಮಗಾರಿಗಳನ್ನು ವಿನ್ಯಾಸದಾರರು ಮಾಡುವುದು.

8. ಸದರಿ ವಸತಿ ಉದ್ದೇಶದ ವಿನ್ಯಾಸದಲ್ಲಿ ನಿವೇಶನದಾರರು ತಾವು ಕಟ್ಟಲಿರುವ ಕಟ್ಟಡಗಳಿಗೆ ಮಹಾನಗರ ಪಾಲಿಕೆಯಿಂದ ಪರವಾನಗಿ ಪಡೆಯತಕ್ಕದ್ದು.

9. ಪಾಲಿಕೆ ತಿಳಿಸುವ ಅವಧಿಯವರೆಗೆ ವಸತಿ ಉದ್ದೇಶದ ವಿನ್ಯಾಸದಲ್ಲಿ ಮೂಲಭೂತ ಸೌಕರ್ಯಗಳ ನಿರ್ವಹಣೆಯನ್ನು ವಿನ್ಯಾಸದಾರರು ಮಾಡುವುದು.

10. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ತಿದ್ದುಪಡಿ ಕಲಂ 17 (2ಎ) ರನ್ವಯ ಸದರಿ ವಿನ್ಯಾಸಕ್ಕೆ ಅಂತಿಮ ಅನುಮೋದನೆಯನ್ನು ಪ್ರಾಧಿಕಾರದಿಂದ ಪಡೆಯುವ ಶರತ್ತಿಗೆ ಒಳಪಟ್ಟು ಮುಕ್ತಾಯ ಪ್ರಮಾಣ ಪತ್ರ ನೀಡಲಾಗಿದೆ.

ಆಯುಕ್ತರು,
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,
ಹುಬ್ಬಳ್ಳಿ.

<u>ಸದರ ಪ್ರತಿಯನ್ನು ಆದರಪೂರ್ವಕವಾಗಿ :</u>

1. ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಇವರಿಗೆ ಮುಕ್ತಾಯ ಪ್ರಮಾಣ ಪತ್ರದ ದಾಖಲಾತಿಗಳೊಂದಿಗೆ 1) ಇಂಡೆಮ್ನಿನಟಿ ಬಾಂಡ, 2) ರೀಲ್ವಿಂಕಿಶ್ ಡೀಡ 3) ಮುಚ್ಚಳಿಕೆ ಪತ್ರ, 4) ಹೆಸ್ಕಾಂ ಇವರ ಪತ್ರ, 5) ಕೊಳವೆ ಬಾವಿಯ ಡ್ರೀಲ್ಲಿಂಗ್ ರಿಪೋರ್ಟ 6) ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಿರುವ ನಕ್ಷೆಗಳು 5 ಪ್ರತಿಗಳಲ್ಲಿ ಇತ್ಯಾದಿಗಳನ್ನು ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ. ಪ್ರಾಧಿಕಾರದ ಅಧಿನಿಯಮ ಉಪಬಂಧ 30 ರನ್ವಯ ಸದರಿ ವಸತಿ ಉದ್ದೇಶದ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.
2. ಶ್ರೀಮತಿ ತಸ್ನಿಮ ಸಮ್ಸಿ ಕೋಂ ಮಹಮ್ಮದ ಇಸ್ಮಾಯಿಲ್ ಸಮ್ಸಿ ಹಾಗೂ ಇತರರು, 1 ನೇ ಮಹಡಿ, ರಿಲಾಯನ್ಸ್ ಡಿಜಿಟಲ್ ಮೇಲುಗಡೆ, ವಿದ್ಯಾನಗರ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಪ್ರಾಧಿಕಾರದ ಯೋಜನಾ ವಿಭಾಗಕ್ಕೆ.
4. ಹೆಚ್ಚಿನ ಪ್ರತಿ.